**All India Radio: Bangalore**
**National Bulletin In Kannada**
**12.10.2026 1.10 pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**12.10.2026 1.10 pm**

**<>><><*><><<>**

ಮುಖ್ಯಾಂಶಗಳು

೧. ಸಾಂವಿಧಾನಿಕ ಹಕ್ಕುಗಳ ಉಲ್ಲಂಘನೆಯಾದಾಗ ನ್ಯಾಯಾಲಯಗಳ ಹಸ್ತಕ್ಷೇಪ ಅಗತ್ಯ - ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್

೨. ಅಂತಾರಾಷ್ಟ್ರೀಯ ಸಹಕಾರ ಕೇವಲ ರಾಜತಾಂತ್ರಿಕ ಆಯ್ಕೆಯಲ್ಲ, ಕಾರ್ಯತಂತ್ರದ ಅಗತ್ಯತೆ - ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್

೩. ಮುಂಬೈನಲ್ಲಿ ಜಲಾಂತರ್ಗಾಮಿ ನಿಗ್ರಹ ಬಲದ ಮಾಂಗ್ರೋಲ್ ಯುದ್ಧನೌಕೆ, ಭಾರತೀಯ ನೌಕಾಪಡೆಗೆ ಸೇರ್ಪಡೆ

೪. ಪೂರ್ವ ಆಫ್ರಿಕಾದ ಜಿಬೌಟಿ ಕರಾವಳಿಯಲ್ಲಿ ವಲಸಿಗರ ದೋಣಿ ದುರಂತ ; ೧೩೯ ಮಂದಿ ಸಾವು, ಹಲವರು ನಾಪತ್ತೆ

೫. ೨೩ ವರ್ಷದೊಳಗಿನವರ ವಿಶ್ವ ಕುಸ್ತಿ ಚಾಂಪಿಯನ್‌ಶಿಪ್-೨೦೨೬ ; ಅಮೆರಿಕದ ಲಾಸ್‌ವೇಗಾಸ್‌ನಲ್ಲಿ ಇಂದಿನಿಂದ ಆರಂಭ

**<>><><*><><<>**

ಸಾಂವಿಧಾನಿಕ ಹಕ್ಕುಗಳಿಗೆ ಧಕ್ಕೆಯಾದಾಗ ಅಥವಾಅವುಗಳ ಉಲ್ಲಂಘನೆಯಾದಾಗ ನ್ಯಾಯಾಲಯಗಳ ಹಸ್ತಕ್ಷೇಪ ಅಗತ್ಯ ಎಂದು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಪ್ರತಿಪಾದಿಸಿದ್ದಾರೆ. ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಎನ್‌ಎಚ್‌ಆರ್‌ಸಿ ಯ ೩೩ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ದೇಶದ ಸಂವಿಧಾನ ಪ್ರತಿಯೊಬ್ಬ ಪ್ರಜೆಗೂ ಘನತೆ, ಸಮಾನತೆ, ಸ್ವಾತಂತ್ರ್ಯ ಮತ್ತು ನ್ಯಾಯದ ಭರವಸೆಗಳನ್ನು ನೀಡಿದೆ. ಮಾನವ ಹಕ್ಕುಗಳ ಆಯೋಗಗಳು ಸಾರ್ವಜನಿಕ ದೂರುಗಳನ್ನು ಕೂಲಂಕುಷವಾಗಿ ತನಿಖೆ ನಡೆಸಿ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಗುರುತಿಸಬೇಕು ಎಂದರು. ಸೂಕ್ತ ಆರೋಗ್ಯ ರಕ್ಷಣೆ, ಆಹಾರ, ವಸತಿ, ಜೀವನೋಪಾಯ ಮತ್ತು ಸ್ವಚ್ಛ ಪರಿಸರವನ್ನು ಪಡೆಯುವುದು ಮಾನವ ಹಕ್ಕುಗಳ ಪ್ರಮುಖ

ಭಾಗವಾಗಿದೆ. ಕಳೆದ ೩೩ ವರ್ಷಗಳಲ್ಲಿ ಎನ್‌ಎಚ್‌ಆರ್‌ಸಿ ೨೪ಕ್ಕೂ ಹೆಚ್ಚು ಪ್ರಕರಣಗಳನ್ನು ದಾಖಲಿಸಿಕೊಂಡು ಶೇಕಡ ೯೮ಕ್ಕಿಂತ ಅಧಿಕ ವಿಲೇವಾರಿ ದರದೊಂದಿಗೆ ೨೩ ಲಕ್ಷಕ್ಕೂ ಅಧಿಕ ಪ್ರಕರಣಗಳನ್ನು ಯಶಸ್ವಿಯಾಗಿ ಪರಿಹರಿಸಿರುವುದು ಶ್ಲಾಘನೀಯ ಎಂದರು.

<>><><*><><<>

ಇಂದಿನ ಜಾಗಿತಿಕ ಪರಿಸ್ಥಿತಿಯಲ್ಲಿ ಅಂತಾರಾಷ್ಟ್ರೀಯ ಸಹಕಾರ, ಕೇವಲ ರಾಜತಾಂತ್ರಿಕ ಆಯ್ಕೆಯಲ್ಲ, ಬದಲಿಗೆ ವಿಶ್ವದ ಶಾಂತಿ, ಭದ್ರತೆ ಮತ್ತು ಸಮೃದ್ಧಿಗಾಗಿ ಅದೊಂದು ಕಾರ್ಯತಂತ್ರದ ಅಗತ್ಯತೆಯಾಗಿದೆ ಎಂದು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ತಿಳಿಸಿದ್ದಾರೆ. ನವದೆಹಲಿಯಲ್ಲಿ ನಡೆದ ೬೬ನೇ ರಾಷ್ಟ್ರೀಯ ರಕ್ಷಣಾ ಕಾಲೇಜಿನ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ಹವಾಮಾನ ವೈಪರೀತ್ಯ ಮತ್ತು ಭಯೋತ್ಪಾದನೆಯಂತಹ ಜಾಗತಿಕ ಸಮಸ್ಯೆಗಳಿಗೆ ಸಾಮೂಹಿಕ ಪ್ರತಿಕ್ರಿಯೆ ಅತ್ಯಗತ್ಯ ಎಂದರು. 'ವಸುಧೈವ ಕುಟುಂಬಕಮ್' ಎಂಬುದು ಭಾರತಕ್ಕೆ ಕೇವಲ ಘೋಷಣೆಯಲ್ಲ ಎಂದು ಬಣ್ಣಿಸಿದ ಉಪರಾಷ್ಟ್ರಪತಿಗಳು, ಜಗತ್ತಿನ ಯಾವುದೇ ರಾಷ್ಟ್ರದಲ್ಲಿ ವಿಪತ್ತು ಸಂಭವಿಸಿದಾಗ ಮೊದಲು ಸ್ಪಂದಿಸುವ ದೇಶಗಳಲ್ಲಿ ಭಾರತ ಮುಂಚೂಣಿಯಲ್ಲಿದೆ ಎಂದು ತಿಳಿಸಿದರು. ಭಾರತವು ಇತರೆ ದೇಶಗಳ ಮೇಲೆ ಆಳ್ವಿಕೆ ನಡೆಸಲು ಅಥವಾ ಆಜ್ಞೆ ಮಾಡಲು ಅತ್ಯಂತ ಶಕ್ತಿಶಾಲಿ ರಾಷ್ಟ್ರವಾಗಲು ಬಯಸುವುದಿಲ್ಲ, ಬದಲಿಗೆ ಬೇರೆ ಯಾವ ದೇಶವೂ ಭಾರತಕ್ಕೆ ನಿಯಮಗಳನ್ನು ಹೇರದಂತೆ ಭದ್ರಪಡಿಸಿಕೊಳ್ಳಲು ಬಲಶಾಲಿಯಾಗಲು ಬಯಸುತ್ತದೆ ಎಂದು ಅವರು ಸ್ಪಷ್ಟಪಡಿಸಿದರು.

<>><><*><><<>

ನವರಾತ್ರಿಯ ಎರಡನೇ ದಿನದ ಸಂದರ್ಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ದೇಶದ ಜನತೆಗೆ ಶುಭ ಕೋರಿದ್ದಾರೆ. ತಪಸ್ಸು, ತ್ಯಾಗ ಮತ್ತು ಸಂಕಲ್ಪದ ಪ್ರತೀಕವಾದ ತಾಯಿ ಬ್ರಹ್ಮಚಾರಿಣಿಯನ್ನು ನವರಾತ್ರಿಯ ಎರಡನೇ ದಿನದಂದು ಪೂಜಿಸಲಾಗುತ್ತದೆ ಎಂದು ಸಾಮಾಜಿಕ ಜಾಲತಾಣದ ಪೋಸ್ಟ್‌ನಲ್ಲಿ ಪ್ರಧಾನಿ ತಿಳಿಸಿದ್ದಾರೆ. ದೇವಿ ಬ್ರಹ್ಮಚಾರಿಣಿಯ ಕೃಪೆಯಿಂದ ಎಲ್ಲರಿಗೂ ಧೈರ್ಯ ಮತ್ತು ಆತ್ಮಸಂಯಮ ಪ್ರಾಪ್ತವಾಗಲಿ ಎಂದು ಅವರು ಹಾರೈಸಿದ್ದಾರೆ.

<>><><*><><<>

ಕೊಚ್ಚಿನ್ ಶಿಪ್‌ಯಾರ್ಡ್ ನಿರ್ಮಿಸಿರುವ ೩ನೇ ಜಲಾಂತರ್ಗಾಮಿ ನಿಗ್ರಹ ಆಳವಿಲ್ಲದ ನೀರು ಯುದ್ಧ ನೌಕೆ ಮಾಂಗ್ರೋಲ್ ಮುಂಬೈನ ನೌಕಾ ನೆಲೆಯಲ್ಲಿ ಇಂದು ಭಾರತೀಯ ನೌಕಾಪಡೆಗೆ ಅಧಿಕೃತವಾಗಿ ಸೇರ್ಪಡೆಗೊಂಡಿದೆ. ಗುಜರಾತ್‌ನ ಜುನಾಗಢ್ ಜಿಲ್ಲೆಯ ಕರಾವಳಿ ಪಟ್ಟಣ ಮಾಂಗ್ರೋಲ್‌ನ ಹೆಸರನ್ನು ಇಡಲಾಗಿರುವ ಈ ನೌಕೆ ೨೦೦೪ರವರೆಗೆ ಸೇವೆ ಸಲ್ಲಿಸಿದ್ದ ಹಳೆಯ

ಐಎನ್‌ಎಸ್ ಮಾಂಗ್ರೋಲ್ ಎಂ-೮೫ ನೌಕೆಯ ಪರಂಪರೆಯನ್ನು ಮುಂದುವರಿಸಲಿದೆ. ಸೇರ್ಪಡೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವೈಸ್ ಅಡ್ಮಿರಲ್ ಸಂಜಯ್ ವಾತ್ಸಾಯನ್ ವಹಿಸಿದ್ದರು. ಆತ್ಮ ನಿರ್ಭರ್ ಭಾರತ ಯೋಜನೆಯಡಿ ಶೇಕಡ ೮೦ಕ್ಕೂ ಅಧಿಕ ಸ್ವದೇಶಿ ತಂತ್ರಜ್ಞಾನ ಬಳಸಿ ನಿರ್ಮಿಸಲಾಗಿರುವ ಈ ನೌಕೆ, ಕರಾವಳಿ ಮತ್ತು ಆಳವಿಲ್ಲದ ನೀರಿನಲ್ಲಿ ಜಲಾಂತರ್ಗಾಮಿ ಬೆದರಿಕೆಗಳನ್ನು ಮೆಟ್ಟಿ ನಿಲ್ಲಲು ಅತ್ಯಾಧುನಿಕ ಅಭಯ್ ಸೋನಾರ್, ಲಘು ಟಾರ್ಪಿಡೊ ಮತ್ತು ರಾಕೆಟ್ ಲಾಂಚರ್‌ಗಳನ್ನು ಹೊಂದಿದೆ. ಈ ನೌಕೆ ಕರಾವಳಿ ಭಾಗಗಳಲ್ಲಿ ನೌಕಾಪಡೆಯ ಜಲಾಂತರ್ಗಾಮಿ ನಿಗ್ರಹ ಮತ್ತು ಭದ್ರತಾ ಸಾಮರ್ಥ್ಯವನ್ನು ಗಣನೀಯವಾಗಿ ಹೆಚ್ಚಿಸಲಿದೆ.

<>><><*><><<>

ಸುಪ್ರೀಂ ಕೋರ್ಟ್‌ನ ಬಾಗಿಲು ಎಲ್ಲರಿಗೂ ಮುಕ್ತವಾಗಿದ್ದು, ಸಾರ್ವಜನಿಕರು ಅಥವಾ ಯಾವುದೇ ಚುನಾಯಿತ ಸಂಸ್ಥೆಯ ಸದಸ್ಯರಿಂದ ಬರುವ ಅರ್ಜಿಯನ್ನು ಸ್ವಾಗತಿಸುವುದಾಗಿ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ತಿಳಿಸಿದ್ದಾರೆ. ಪ್ರತಿಯೊಬ್ಬ ಭಾರತೀಯ ನಾಗರಿಕರಿಗೂ ನ್ಯಾಯಾಲಯದ ಮೆಟ್ಟಿಲೇರುವ ಹಕ್ಕಿದೆ ಎಂದು ಹೇಳಿರುವ ಅವರು, ನಾಗರಿಕರ ಆತಂಕಗಳನ್ನು ಆಲಿಸಿ ಕಾನೂನಿನ ಅಡಿಯಲ್ಲಿ ಸಿಗಬೇಕಾದ ಸೂಕ್ತ ಪರಿಹಾರವನ್ನು ನ್ಯಾಯಾಲಯ ಒದಗಿಸಲಿದೆ ಎಂದು ಭರವಸೆ ನೀಡಿದ್ದಾರೆ. ಇದೇ ವೇಳೆ, ಐಎನ್‌ಡಿಐ ಮೈತ್ರಿಕೂಟ, ಭೇಟಿಗೆ ಕೋರಿರುವ ಮನವಿಗೆ ಪ್ರತಿಕ್ರಿಯಿಸಿರುವ ಅವರು, ತಮಗೆ ಭೇಟಿಗಾಗಿ ಕೋರಿ ನಿನ್ನೆ ಪತ್ರ ಬಂದಿದ್ದು, ತಾವೇಕೆ ಭೇಟಿಯಾಗಲು ಅಸಾಧ್ಯ ಎಂಬುದನ್ನು ವಿವರಿಸಿ ನಿನ್ನೆ ರಾತ್ರಿಯೇ ಅವರಿಗೆ ಉತ್ತರ ಕಳುಹಿಸಲಾಗಿದೆ ಎಂದು ತಿಳಿಸಿದ್ದಾರೆ.

<>><><*><><<>

’ಜನ ಸೇವೆಯಿಂದ ದೇಶ ಸೇವೆ’ ಎಂಬ ಮಂತ್ರದಡಿ ಜನರ ಏಳಿಗೆಯ ಅಚಲ ಬದ್ಧತೆಯೊಂದಿಗೆ, ಸಾರ್ವಜನಿಕ ಸೇವೆಯ ೨೫ ವರ್ಷಗಳ ಪಯಣವನ್ನು ಪ್ರಧಾನಿ ನರೇಂದ್ರ ಮೋದಿ ಪೂರೈಸಿದ್ದಾರೆ. ಸೇವೆ ಮತ್ತು ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ, ೨೦೪೭ರ ವೇಳೆಗೆ ’ವಿಕಸಿತ ಭಾರತ’ ಗುರಿ ಸಾಧನೆಯತ್ತ ಸಾಗುತ್ತಿದೆ. ಅದರ ಭಾಗವಾಗಿ, ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ ’ಸ್ವಚ್ಛ ಭಾರತ್ ಮಿಷನ್ ಕುರಿತ ಒಂದು ವರದಿ ಇಲ್ಲಿದೆ. ೨೦೧೪ರಲ್ಲಿ ಪ್ರಾರಂಭವಾದ ಸ್ವಚ್ಛ ಭಾರತ್ ಅಭಿಯಾನವು ದೇಶದ ನೈರ್ಮಲ್ಯ ಕ್ಷೇತ್ರವನ್ನು ಕೇವಲ ಸರ್ಕಾರದ ಯೋಜನೆಯಾಗಿ ಉಳಿಸದೆ ಜನಪ್ರಿಯ ’ಜನ ಆಂದೋಲನ’ವನ್ನಾಗಿ ಪರಿವರ್ತಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನೈರ್ಮಲ್ಯ ಮತ್ತು ನಾಗರಿಕ ಗೌರವಕ್ಕೆ

ಆದ್ಯತೆ ನೀಡಲಾಗಿದ್ದು, ದೇಶಾದ್ಯಂತ ೧೨ ಕೋಟಿಗೂ ಹೆಚ್ಚು ಗೃಹ ಶೌಚಾಲಯಗಳನ್ನು ನಿರ್ಮಿಸುವ ಮೂಲಕ ೨೦೧೯ರ ವೇಳೆಗೆ ಭಾರತದ ಗ್ರಾಮಗಳನ್ನು 'ಬಹಿರಂಗ ಶೌಚ ಮುಕ್ತ' ಎಂದು ಘೋಷಿಸಲಾಯಿತು. ಜೊತೆಗೆ, 'ಸ್ವಚ್ಛತಾ ಸರ್ವೇಕ್ಷಣೆ' ಸ್ಪರ್ಧೆಯು ನಗರಗಳು ಮತ್ತು ಪಟ್ಟಣಗಳಲ್ಲಿ ಸ್ವಚ್ಛತೆ, ತ್ಯಾಜ್ಯ ನಿರ್ವಹಣೆ ಹಾಗೂ ನಾಗರಿಕರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಿದೆ. ಸ್ವಚ್ಛ ಭಾರತ್ ಮಿಷನ್ ಕುರಿತಂತೆ ಆಕಾಶವಾಣಿಯೊಂದಿಗೆ ಭಾರತೀಯ ಸಾಂಖ್ಯಿಕ ಸಂಸ್ಥೆಯ ಹಿರಿಯ ಪ್ರಾಧ್ಯಾಪಕರಾದ ಡಾ.ಎಂ.ಕೃಷ್ಣಮೂರ್ತಿ ಮಾತನಾಡಿದ್ದಾರೆ.

**ಧ್ವನಿ: ಹಿರಿಯ ಪ್ರಾಧ್ಯಾಪಕ, ಡಾ.ಎಂ.ಕೃಷ್ಣಮೂರ್ತಿ**

**<><><*><><<>**

ಪೂರ್ವ ಆಫ್ರಿಕಾದ ಜಿಬೌಟಿ ಕರಾವಳಿಯ ಒಬಾಕ್ ಸಮೀಪ್ ಗುಹೆರೆ ಬಳಿ ವಲಸಿಗರನ್ನು ಹೊತ್ತೊಯ್ಯುತ್ತಿದ್ದ ಜನ ನಿಬಿಡ ದೋಣಿಯೊಂದು ಮುಳುಗಿದ ಪರಿಣಾಮ ೧೬ ಮಕ್ಕಳು ಸೇರಿದಂತೆ ೧೩೯ ಮಂದಿ ಮೃತಪಟ್ಟಿದ್ದಾರೆ ಎಂದು ಅಂತಾರಾಷ್ಟ್ರೀಯ ವಲಸೆ ಸಂಸ್ಥೆ ತಿಳಿಸಿದೆ. ಗುರುವಾರ ರಾತ್ರಿ ದೋಣಿಯು ಪ್ರಯಾಣ ಬೆಳೆಸಿದ ಕೆಲವೇ ಕ್ಷಣಗಳಲ್ಲಿ ದಡದ ಸಮೀಪದಲ್ಲೇ ಅಪಘಾತ ಸಂಭವಿಸಿದೆ. ದೋಣಿಯಲ್ಲಿ ಒಟ್ಟು ೩೦೬ ವಲಸಿಗರು ಪ್ರಯಾಣಿಸುತ್ತಿದ್ದರು. ದುರಂತದಲ್ಲಿ ಬದುಕುಳಿದ ಇಥಿಯೋಪಿಯಾ ಮೂಲದ ೮೦ಕ್ಕೂ ಹೆಚ್ಚು ಜನರನ್ನು ರಕ್ಷಿಸಲಾಗಿದ್ದು, ಸ್ಥಳೀಯ ಆಡಳಿತ ಅವರನ್ನು ಒಬಾಕ್‌ನಲ್ಲಿರುವ ಅಂತಾರಾಷ್ಟ್ರೀಯ ವಲಸೆ ಸಂಸ್ಥೆಯ ರಕ್ಷಣಾ ಕೇಂದ್ರಕ್ಕೆ ಸ್ಥಳಾಂತರಿಸಿದೆ. ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಮುಂದುವರೆದಿದ್ದು, ಇನ್ನು ೮೪ ಮಂದಿ ನಾಪತ್ತೆಯಾಗಿದ್ದಾರೆ. ಮೃತರ ಸಂಖ್ಯೆ ಏರುವ ಸಾಧ್ಯತೆಯಿದೆ ಎಂದು ಸಂಸ್ಥೆ ತಿಳಿಸಿದೆ.

**<><><*><><<>**

ಸಮಾಜವಾದಿ ಚಿಂತಕ ಮತ್ತು ಸ್ವಾತಂತ್ರ್ಯ ಹೋರಾಟಗಾರ ಡಾ.ರಾಮ್‌ಮನೋಹರ್ ಲೋಹಿಯಾ ಅವರ ಪುಣ್ಯಸ್ಮರಣೆಯ ದಿನವಾದ ಇಂದು ಅವರಿಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಗೌರವ ನಮನ ಸಲ್ಲಿಸಿದ್ದಾರೆ. ಡಾ. ರಾಮ್ ಮನೋಹರ್ ಲೋಹಿಯಾ ಅವರ ಜೀವನವು ರಾಜಕೀಯ ಸಮಗ್ರತೆ, ಸಾಮಾಜಿಕ ನ್ಯಾಯ ಮತ್ತು ವಂಚಿತರ ಹಕ್ಕುಗಳಿಗಾಗಿ ನಡೆಸುವ ಹೋರಾಟಕ್ಕೆ ಸ್ಫೂರ್ತಿಯಾಗಿದೆ ಎಂದು ಸಚಿವರು ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ.

**<><><*><><<>**

೨೩ ವರ್ಷದೊಳಗಿನವರ ವಿಶ್ವ ಕುಸ್ತಿ ಚಾಂಪಿಯನ್ ಶಿಪ್-೨೦೨೫ ಪಂದ್ಯಾವಳಿಗೆ ಅಮೆರಿಕದ ಲಾಸ್‌ವೇಗಸ್‌ನಲ್ಲಿ ಇಂದಿನಿಂದ ಚಾಲನೆ ದೊರೆಯುತ್ತಿದ್ದು, ಪಂದ್ಯಾವಳಿ ಇದೇ ೧೮ರವರೆಗೆ ನಡೆಯಲಿದೆ. ಗ್ರಿಕೊರೋಮನ್, ಮಹಿಳಾ ಫ್ರಿಸ್ಟೈಲ್ ಮತ್ತು ಪುರುಷರ ಫ್ರೀಸ್ಟೈಲ್ ಎಂಬ ಮೂರು

ಒಲಿಂಪಿಕ್ ಶೈಲಿಗಳ ೩೦ ತೂಕ ವಿಭಾಗಗಳಲ್ಲಿ ಸೆಣಸಾಟ ನಡೆಸಲು ವಿಶ್ವಾದ್ಯಂತದ ೬೦೦ಕ್ಕೂ ಅಧಿಕ ಯುವಕುಸ್ತಿಪಟುಗಳು ಆಗಮಿಸಿದ್ದಾರೆ. ಅಮೆರಿಕದ ನೆಲದಲ್ಲಿ ಇದೇ ಮೊದಲ ಬಾರಿಗೆ ೧೩ ವರ್ಷದೊಳಗಿನವರ ವಿಶ್ವ ಕುಸ್ತಿ ಚಾಂಪಿಯನ್ ಶಿಪ್ ನಡೆಯುತ್ತಿರುವುದು ವಿಶೇಷವಾಗಿದೆ.

**<>><><*><><<>**

ಮಹಿಳೆಯರು ಮತ್ತು ತೃತೀಯ ಲಿಂಗಿ ವ್ಯಕ್ತಿಗಳಿಗೆ ಸುರಕ್ಷಿತ, ಗೌರವಾನ್ವಿತ ಮತ್ತು ಸ್ವಾವಲಂಬಿ ಉದ್ಯೋಗವಕಾಶಗಳನ್ನು ಕಲ್ಪಿಸುವ ಉದ್ದೇಶದಿಂದ ದೆಹಲಿ ಸರ್ಕಾರ ದುರ್ಗ ಇ-ಆಟೋ ಯೋಜನೆಯನ್ನು ಜಾರಿಗೆ ತರಲು ಮುಂದಾಗಿದೆ. ಈ ಯೋಜನೆಯು ರಾಷ್ಟ್ರ ರಾಜಧಾನಿಯಲ್ಲಿ ಹಸಿರು ಮತ್ತು ಎಲ್ಲರನ್ನೊಳಗೊಂಡ ಸಮಗ್ರ ಸಾರಿಗೆ ವ್ಯವಸ್ಥೆ ಉತ್ತೇಜಿಸಲಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧.೩೦ ಕ್ಕೆ ><><<>**